
# ಅಮಿತಾಭ್ ದಾಖಲೆ!



ಅಮಿತಾಭ್ ಬಚ್ಚನ್‌ಗೆ ಬಾಲಿವುಡ್‌ನಲ್ಲಿ ಪ್ರತಿಸ್ಪರ್ಧಿ ಯಾರು?

'ಇನ್ಯಾರು..? ಸ್ವತಃ ಅಮಿತಾಭ್!' ಎನ್ನುತ್ತಿದೆ ಬಾಲಿವುಡ್ ಚಿತ್ರರಂಗ.

ಅಮಿತಾಭ್ ಬಚ್ಚನ್ ಅಭಿನಯದ ಸಿನಿಮಾಗಳ ಬಿಡುಗಡೆ ಆಗುವಾಗ ಬೇರೆ ನಿರ್ಮಾಪಕರು ತಮ್ಮ ಸಿನಿಮಾಗಳನ್ನು ಬಿಡುಗಡೆ ಮಾಡಲು ಹಿಂದೆ ಮುಂದೆ ನೋಡುತ್ತಾರೆ. ಅದು ಸಹಜ ಕೂಡಾ. ಯಾವುದೇ ಥಿಯೇಟರಿನಲ್ಲಿ ಅಮಿತಾಭ್‌ನ ಹೊಸ ಸಿನಿಮಾ ಇದ್ದಾಗ ಬೇರೆ ನಟರ ಸಿನಿಮಾಗಳನ್ನು ಯಾರು ನೋಡ ಬಯಸುತ್ತಾರೆ?

ಆದರೆ ಅಮಿತಾಭ್ ಅಭಿನಯದ ಹೊಸ ಚಿತ್ರ ಬಿಡುಗಡೆ ಆಗುವಾಗ, ಅದೇ ಅಮಿತಾಭನ ಇನ್ನೊಂದು ಹೊಸ ಚಿತ್ರ ಬಿಡುಗಡೆ ಆಗಬಾರದು ಎಂದಿಲ್ಲವಲ್ಲ! ಅಂದರೆ ಅಮಿತಾಭ್‌ಗೆ ಅಮಿತಾಭೇ ಪ್ರತಿಸ್ಪರ್ಧಿ!

ಡಿಸೆಂಬರ್ 4ರಂದು ಅಮಿತಾಭ್‌ನ ಹೊಸ ಚಿತ್ರ 'ತೀನ್ ಪತ್ತಿ' ಬಿಡುಗಡೆಯಾಗಲಿದೆ ಎಂದು ಅದರ ನಿರ್ಮಾಪಕರು ಘೋಷಿಸಿದ್ದಾರೆ. ಅದೇ ದಿನ ಅಮಿತಾಭ್ ಅಭಿನಯದ 'ಪಾ' ಚಿತ್ರವೂ ಬಿಡುಗಡೆ ಕಾಣಲಿದೆ ಎಂದು ಇನ್ನೊಬ್ಬ ನಿರ್ಮಾಪಕರೂ ನಿರ್ಧರಿಸಿದ್ದಾರೆ!

'ಪಾ' ಚಿತ್ರದ ನಿರ್ಮಾಪಕರು ಆರಂಭದಲ್ಲಿ ನವೆಂಬರ್ ಬಿಡುಗಡೆ ಎಂದೇ ನಿರ್ಧರಿಸಿದ್ದರಂತೆ. ಆದರೆ ಈಗ ನಿರ್ಧಾರ ಬದಲಿಸಿದ್ದಾರೆ.

ಹಿಂದೆಯೂ ಈ ರೀತಿ ಆಗಿತ್ತು. ಅಮಿತಾಭ್ ಅಭಿನಯದ 'ಕಾಕೀ' ಚಿತ್ರ ಬಿಡುಗಡೆಯಾದಾಗಲೇ 'ಐತ್‌ಬಾರ್' ಚಿತ್ರವೂ ತೆರೆ ಕಂಡಿತ್ತು. ಹಾಗೆಯೇ ಚೀನೀ ಕಮ್ ಮತ್ತು ಶೂಟೌಟ್ ಅಟ್ ಲೋಖಂಡವಾಲಾ ಎರಡೂ ಒಟ್ಟಿಗೇ ಬಿಡುಗಡೆ ಕಂಡಿದ್ದವು!

ಅಂದ ಹಾಗೆ, ಪಾ ಚಿತ್ರದಲ್ಲಿ ಅಮಿತಾಭ್ 12 ವರ್ಷ ವಯಸ್ಸಿನ ಹುಡುಗನ ಪಾತ್ರದಲ್ಲಿ ನಟಿಸಿದ್ದಾರೆ! ನಿರ್ದೇಶಕ ಬಾಲ್ಕಿ ಪ್ರಕಾರ, 'ಈ ಚಿತ್ರದ ಅಭಿನಯ ಸೂಪರ್!' ಟೈಟಲ್ ಕಾರ್ಡ್‌ನಲ್ಲಿ 'ಇಂಟ್ರೊಡೂಸಿಂಗ್ ಅಮಿತಾಭ್' ಎಂದೇ ಹಾಕಿದ್ದಾರಂತೆ. ಅಂದರೆ 12ರ ಹರೆಯದ ಬಾಲಕ ಅಮಿತಾಭನನ್ನು ತೆರೆಗೆ ಮೊದಲ ಬಾರಿಗೆ ಪರಿಚಯಿಸುತ್ತಿದ್ದಾರೆ! 'ಈ ಚಿತ್ರದ ನಟನೆಗೆ ಅವರು ಮಕ್ಕಳ ವಿಭಾಗದ ರಾಷ್ಟ್ರೀಯ ಪ್ರಶಸ್ತಿ ಗೆದ್ದರೂ ಅಚ್ಚರಿಯಿಲ್ಲ' ಎನ್ನುತ್ತಿದೆ ಬಾಲಿವುಡ್!

# ಸಲ್ಮಾನ್ ಭೋಜನ

ತನ್ನ ಆಪ್ತ ಗೆಳೆಯರನ್ನು ಸಲ್ಮಾನ್ ಖಾನ್ ಯಾವತ್ತೂ ಮರೆಯುವುದಿಲ್ಲ ಎನ್ನುವುದು ಮತ್ತೆ ಸಾಬೀತಾಗಿದೆ. ರಂಜಾನ್ ಹಬ್ಬದ ದಿನ ಸಲ್ಮಾನ್ ಕೆಲವೇ ಕೆಲವು ಆಪ್ತೇಷ್ಟರನ್ನು ಕರೆದು ಭರ್ಜರಿ ಊಟ ಕೊಟ್ಟಿದ್ದಾನೆ. ಆಪ್ತರ ಪಟ್ಟಿಯಲ್ಲಿ ಬೋನಿ ಕಪೂರ್, ಶ್ರೀದೇವಿ, ನಿರ್ಮಾಪಕ ವಿಪುಲ್ ಷಾ, ನಿರ್ದೇಶಕ ಡೇವಿಡ್ ಧವನ್ ಮತ್ತು ಸಾಜಿದ್ ನಡಿಯದ್‌ವಾಲಾ ಬಂದಿದ್ದರು. ಜತೆಗೆ ವಿಶೇಷ ಅತಿಥಿಯಾಗಿ ಸಂಸದ ಶತ್ರುಘ್ನ ಸಿನ್ಹಾ ಆಗಮಿಸಿದ್ದು ವಿಶೇಷ! ಸಲ್ಮಾನ್ ಗೆಳತಿ ಕತ್ರೀನಾ ಭೋಪಾಲ್‌ನಲ್ಲಿ ಶೂಟಿಂಗ್ ರದ್ದು ಮಾಡಿ ವಿಶೇಷ ವಿಮಾನದಲ್ಲಿ ಈ ಈದ್ ಊಟಕ್ಕೆ ಬಂದಿದ್ದಳಂತೆ!

'ವಾಂಟೆಡ್' ಚಿತ್ರ ಸೂಪರ್‌ಹಿಟ್ ಆಗಿರುವ ಹಿನ್ನೆಲೆಯಲ್ಲಿ ಸಲ್ಮಾನ್ ಖುಷಿಯಾಗಿದ್ದಾನೆ. ಪಾರ್ಟ್ನರ್ ಚಿತ್ರ ಸೂಪರ್‌ಹಿಟ್ ಆಗಿ ವರ್ಷಗಳೇ ಕಳೆದ ಬಳಿಕ ಸಲ್ಮಾನ್ ಹಿಟ್ ಚಿತ್ರ ನೀಡಿದ್ದಾನೆ. ಈಗ 'ಲಂಡನ್ ಡ್ರೀಮ್ಸ್' ಬಿಡುಗಡೆಯ ಮೇಲೆ ಆತನ ಕಣ್ಣು ನೆಟ್ಟಿದೆ.





# ಸೈಫ್ ಸರ್‌ಪ್ರೈಸ್

ಕರೀನಾ ಕಪೂರ್‌ಳನ್ನು ಖುಷಿಯಾಗಿ ಇರುವಂತೆ ನೋಡಿಕೊಳ್ಳಲು ಸೈಫ್ ಅಲಿ ಏನೆಲ್ಲ ಕಸರತ್ತು ಮಾಡುತ್ತಿದ್ದಾನೆ! ಕರೀನಾ ಹುಟ್ಟುಹಬ್ಬಕ್ಕೆ ಮೊನ್ನೆ ಸೈಫ್ ಭಾರೀ 'ಸರ್‌ಪ್ರೈಸ್' ನೀಡಿದನಂತೆ. ಜೈಪುರದಲ್ಲಿ ಶೂಟಿಂಗ್‌ನಲ್ಲಿದ್ದ ಕರೀನಾಗೆ ಸುದ್ದಿಯೇ ಇಲ್ಲದಂತೆ ಬರ್ತ್‌ಡೇ ದಿನ ಬಂದಿಳಿದ ಸೈಫ್, 'ಉದಯಪುರ ಪ್ಯಾಲೇಸ್'ನಲ್ಲಿ ಭರ್ಜರಿ ಔತಣಕೂಟ ನೀಡಿದನಂತೆ. ಜತೆಗೆ ಔತಣಕೂಟಕ್ಕೆ ಕರೀನಾಳ ತಾಯಿ ಬಬಿತಾ, ಗೆಳತಿಯರಾದ ರೀನಾ ಮತ್ತು ಡಿಸೈನರ್ ಸಬೀನಾ ಖಾನ್‌ರನ್ನೂ ಕರೆದುಕೊಂಡು ಹೋಗಿದ್ದನಂತೆ! ಕೆಲವು ತಿಂಗಳ ಹಿಂದೆಯಷ್ಟೇ ಸೈಫ್ ಕರೀನಾಳನ್ನು ಹಠಾತ್ತಾಗಿ ಯೂರೋಪ್ ಪ್ರವಾಸಕ್ಕೆ ಕರೆದೊಯ್ದು ಒಂದು ಸರ್‌ಪ್ರೈಸ್ ನೀಡಿದ್ದ; ಈಗ ಎರಡನೆಯ ಸರ್‌ಪ್ರೈಸ್! ಕರೀನಾಗೆ ನಂಬಕ್ಕೇ ಆಗುತ್ತಿಲ್ಲವಂತೆ!

–ಬಿಂದು